**GOVERNMENT OF KARNATAKA**

No: HFW 311 ACS 2020 Date: 18.08.2020

**Revised Circular**

**Subject:** Revised guidelines for containment and buffer zones

**References:** 1.Guidelines on Containment plan, Novel Corona Virus Disease 2019 (COVID 19), Version 2 from Ministry of Health and Family Welfare, Government of India dated 16.05.2020

2. Circular No. CHS/392/2020 regarding Containment Zone, etc. from Government of Karnataka, dated 21.05.2020

***

In view of evolving situation of COVID-19 in the State, there are large number of cases reported in houses and apartments which are closely located. This has led to too many Containment Zones, thus making it difficult for authorities to conduct surveillance activities and ensure perimeter control. In this context the following revisedCcircular is issued on Notification and de-notification of Containment and Buffer Zones.

## 1 . Notification of Containment Zone

1.1. **Containment Zone:** Containment Zone is a well-defined "area" around the residence of a COVID -19 positive person where the most intensive measures to prevent the spread of viral infection need to be implemented.

### 1.2. The 'area' is defined as follows for "an individual case" reported:

1.2.1. For an apartment complex – The floor which has the residence of COVID positive person

1.2.2. For an independent house/Villa – The independent house/villa where COVID positive person resides

1.2.3. For a slum area (notified or otherwise) – The street which has the residence of COVID positive person

1.2.4. For a rural area, the complete habitation where the COVID – positive person resides or a smaller contiguous area as deemed appropriate.

1.2.5. For individual cases, the authorities should paste notice on house, inform the neighbors/RWA/Apartment owners Association, identify contacts, advice strict home quarantine, ensure testing of contacts, etc. There is no necessity of hard barricading in such cases. Hand stamping of case and contacts is not necessary.

1.3. The area shall be defined for "a cluster of cases" as follows:

If more number of cases are reported from an area, for operational purposes, the containment zones shall be bigger in size and cover the cluster of closely located COVID patients. The size and boundary shall be decided by:

1.3.1. Mapping of cases and contacts
1.3.2. Geographical dispersion of cases and contacts
1.3.3. Area having well demarcated perimeter
1.3.4. Enforceability of perimeter control

This area should therefore be appropriately defined by Deputy Commissioner of the district/ Commissioner-BBMP with technical inputs at local level and by identifying roads, drains, parks or other features for clear geographical segregation for effective perimeter control. For effective containment, it is advisable to err on the side of caution. The authorities shall ensure cost-effective hard barricading for better perimeter control.

1.4. **Buffer Zone**:

The 'Buffer Zone' is defined as an area where new cases are more likely to appear.

- Buffer Zone will be an area of 200 meters radius around the perimeter of "Containment area" in both urban and rural areas

Deputy Commissioner of the District /Commissioner-BBMP shall define the "Buffer Zone" as per the above criteria by identifying roads, drains, and parks or other features for clear geographical segregation.

2. **Active surveillance:**

Active surveillance and physical distancing measures should be in place in containment and buffer zones to avoid spread of Covid-19 infection. The house to house surveillance should be done daily in the containment zones while in the buffer zone it should be done twice in a week.

3. **De-notification of Containment zone**:

- Containment Zone returns to normalcy if no new COVID-I9 case is reported for at least 14 days after the last COVID-I9 case was reported; and all the contacts of the confirmed case have been followed up for 14 days

4. **The Perimeter control,** incident Commander, role of Police, Gram Panchayat and Health Department, and essential supplies management shall be as per the existing guidelines of GOKdated:21-05-2020 (https://covid19.karnataka.gov.in/storage/pdf-files/SOP%20-%20CONTAINMENT%20ZONE%20CLUSTER%20CIRCULAR%20BY%20CS.pdf)

5. The village/ city/district/state will be declared free from the COVID-19 only after 28 days have passed since the last confirmed case of Covid-19 has been discharged from hospital/home isolation.

Jawaid 18/8/2020
(Jawaid Akhtar)
Additional Chief Secretary to Govt
Health and Family Welfare Department

To:

1) Commissioner, BBMP
2) All Deputy Commissioners
3) All Chief Executive Officer of Zilla Panchayat
4) Commissioner, HFWS
5) Mission Director, NHM
6) Executive Director, SAST
7) Director, HFWS
8) Director, Medical Education.
9) All DHOs
10) All District Surgeons / District Surveillance Officer

Copy to:

1) Chief Secretary to Govt., of Karnataka
2) PS to Hon. Minister for HFW
3) PS to Hon. Minister for Medical Education.

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಕುಕ 311 ಅಮುಕಾ 2020            ದಿನಾಂಕ: 18.08.2020

**ಪರಿಷ್ಕೃತ ಸುತ್ತೋಲೆ**

**ವಿಷಯ: ಕಂಟೇನ್ಮೆಂಟ್ ಜೋನ್ ಹಾಗೂ ಬಫರ್ ವಲಯಗಳ ಬಗ್ಗೆ ಪರಿಷ್ಕೃತ ಮಾರ್ಗಸೂಚಿ.**

ಉಲ್ಲೇಖ: 1. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ, ಇವರ ಕಂಟೇನ್ಮೆಂಟ್ ಯೋಜನೆ, ನೋವೆಲ್ ಕೊರೋನಾ ವೈರಸ್ ಡಿಸೀಜ್ 2019 (ಕೋವಿಡ್ 19), ಕುರಿತಂತೆ ಮಾರ್ಗಸೂಚಿ, ದಿನಾಂಕ: 16.05.2020.

2. ಕಂಟೇನ್ಮೆಂಟ್ ವಲಯ ಕುರಿತಂತೆ, ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ: CHS/ 392/2020, ದಿನಾಂಕ: 21.05.2020.

**********

ರಾಜ್ಯದಲ್ಲಿ ಕೋವಿಡ್-19 ವಿಕಸಿಸುತ್ತಿರುವ ಸಂದರ್ಭದಲ್ಲಿ, ಹೆಚ್ಚಿನ ಸಂಖ್ಯೆಯ ಕೋವಿಡ್ ಪ್ರಕರಣಗಳು ಅಕ್ಕ-ಪಕ್ಕದಲ್ಲಿರುವ / ಹತ್ತಿರದಲ್ಲಿಯೇ ಇರುವ ಮನೆಗಳು ಅಥವಾ ಅಪಾರ್ಟ್‌ಮೆಂಟ್ / ವಸತಿ ಸಮುಚ್ಚಯಗಳಲ್ಲಿ ವರದಿಯಾಗುತ್ತಿವೆ. ಇದರಿಂದ ಕಂಟೇನ್ಮೆಂಟ್ ವಲಯಗಳ ಸಂಖ್ಯೆಯು ಮಿತಿ ಮೀರಿದ್ದು, ಪ್ರಾಧಿಕಾರಗಳಿಗೆ ಸರ್ವೇಕ್ಷಣಾ ಚಟುವಟಿಕೆಗಳನ್ನು ಸುಲಭವಾಗಿ ಕೈಗೊಳ್ಳಲು ಅಡ್ಡಿಯಾಗುವುದೇ ಅಲ್ಲದೇ, ಪರಿಧಿ ವಲಯ ನಿಯಂತ್ರಣ (Perimeter control) ವನ್ನೂ ಸಹ ಖಚಿತಪಡಿಸಿಕೊಳ್ಳುವುದು ಕಷ್ಟಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಕಂಟೇನ್ಮೆಂಟ್ ಜೋನ್ ಹಾಗೂ ಬಫರ್ ವಲಯಗಳ ಅಧಿಸೂಚನೆ ಹಾಗೂ ಮುಕ್ತಗೊಳಿಸುವುದರ (ಸಡಿಲಿಸುವಿಕೆ) ಕುರಿತು ಈ ಕೆಳಕಂಡಂತೆ ಪರಿಷ್ಕೃತ ಸುತ್ತೋಲೆಯನ್ನು ಹೊರಡಿಸಲಾಗಿದೆ.

## 1. ಕಂಟೇನ್ಮೆಂಟ್ ವಲಯವೆಂದು ಅಧಿಸೂಚನೆ ಹೊರಡಿಸುವ ಬಗ್ಗೆ

**1.1. ಕಂಟೇನ್ಮೆಂಟ್ ವಲಯ :** ಕೋವಿಡ್ – 19 (ನೋವೆಲ್ ಕೊರೋನಾ ವೈರಸ್) ದೃಢಪಟ್ಟ ಪ್ರಕರಣ / ವ್ಯಕ್ತಿಯು ವಾಸವಿರುವ ಮನೆಯ ಸುತ್ತಲಿನ ಸುಸ್ಪಷ್ಟ (well-defined) ಪ್ರದೇಶವನ್ನು ಕಂಟೇನ್ಮೆಂಟ್ ವಲಯವೆಂದು ಕರೆಯಲಾಗುತ್ತದೆ. ಸದರಿ ಪ್ರದೇಶದಲ್ಲಿ ಸೋಂಕು ಹರಡದಂತೆ ತೀವ್ರ ಗತಿಯಲ್ಲಿ ಅಗತ್ಯ ಕ್ರಮಗಳನ್ನು ಅನುಷ್ಠಾನಗೊಳಿಸುವುದು ಅಗತ್ಯವಾಗಿದೆ.

**1.2. ವರದಿಯಾಗುವ "ಪ್ರತಿ ಪ್ರಕರಣದ" ಅನ್ವಯ 'ಪ್ರದೇಶ'ವನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಲಾಗಿದೆ:**

1.2.1. ವಸತಿ ಸಮುಚ್ಚಯಗಳು (Apartment Complex) - ಕೋವಿಡ್ – 19 ದೃಢಪಟ್ಟ ವ್ಯಕ್ತಿಯ ಮನೆ ಇರುವ ಮಹಡಿ.

1.2.2. ಸ್ವತಂತ್ರವಾದ ಮನೆ / ವಿಲ್ಲಾ ( Independent house/Villa) - ಕೋವಿಡ್ – 19 ದೃಢಪಟ್ಟ ವ್ಯಕ್ತಿಯು ವಾಸವಿರುವ ಮನೆ / ವಿಲ್ಲಾ.

1.2.3. ಕೊಳಗೇರಿ ಪ್ರದೇಶ ( ಸೂಚಿತ ಅಥವಾ ಸೂಚಿತವಲ್ಲದ – notified or otherwise) – ಕೋವಿಡ್-19 ದೃಢಪಟ್ಟ ವ್ಯಕ್ತಿಯ ಮನೆ ಇರುವ ಬೀದಿ / ರಸ್ತೆ.

1.2.4. ಗ್ರಾಮಾಂತರ ಪ್ರದೇಶದಲ್ಲಿ, ಕೋವಿಡ್-19 ದೃಢಪಟ್ಟ ವ್ಯಕ್ತಿಯು ವಾಸವಿರುವ ಸಂಪೂರ್ಣ ವಾಸಸ್ಥಾನ ಅಥವಾ ವ್ಯಕ್ತಿಯ ವಾಸಸ್ಥಾನದ ಅಕ್ಕ-ಪಕ್ಕದಲ್ಲಿ ಪರಸ್ಪರ ಹೊಂದಿಕೊಂಡಂತಿರುವ, ಸೂಕ್ತವಾದ ಸಣ್ಣ ಪ್ರದೇಶಗಳನ್ನು ಪರಿಗಣಿಸಬೇಕು.

1.2.5. ವರದಿಯಾಗುವ ಪ್ರತಿ ಪ್ರಕರಣದ ಮನೆಯ ಮೇಲೆ ನೋಟಿಸ್ ಅಂಟಿಸುವುದು, ನೆರೆ ಹೊರೆಯವರಿಗೆ, ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್ / ವಸತಿ ಸಮುಚ್ಛಯದ ಮಾಲೀಕರ ಅಸೋಸಿಯೇಷನ್ ಗೆ ಮಾಹಿತಿ ನೀಡುವುದು, ಸಂಪರ್ಕಿತರನ್ನು ಗುರುತಿಸುವುದು, ಹೋಂ ಕ್ವಾರೆಂಟೈನ್ ನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿವುದು, ಸಂಪರ್ಕಿತರನ್ನು ಪರೀಕ್ಷೆಗೆ ಒಳಪಡಿಸುವುದನ್ನು ಖಚಿತಪಡಿಸಿಕೊಳ್ಳುವುದು, ಇತ್ಯಾದಿಗಳನ್ನು ಅಧಿಕಾರಿಗಳು ಕೈಗೊಳ್ಳಬೇಕು. ಇಂತಹ ಸ್ಥಳಗಳಲ್ಲಿ ಬ್ಯಾರಿಕೇಡ್ ಗಳನ್ನು ಅಳವಡಿಸುವ ಅಗತ್ಯವಿರುವುದಿಲ್ಲ. ಪ್ರಕರಣಗಳ ಹಾಗೂ ಸಂಪರ್ಕಿತರ ಹ್ಯಾಂಡ್ ಸ್ಟ್ಯಾಂಪಿಂಗ್‌ನ ಅಗತ್ಯವಿರುವುದಿಲ್ಲ.

**1.3. ಯಾವುದೇ ಪ್ರದೇಶದಲ್ಲಿ ಪ್ರಕರಣಗಳು ಗುಂಪಾಗಿ (a cluster of cases) ವರದಿಯಾದ ಸಂದರ್ಭದಲ್ಲಿ ಈ ಕೆಳಗಿನಂತೆ ಕ್ರಮವಹಿಸುವುದು:**

ಒಂದು ಪ್ರದೇಶದಲ್ಲಿ ಹೆಚ್ಚು ಪ್ರಕರಣಗಳು ವರದಿಯಾದ ಸಂದರ್ಭದಲ್ಲಿ ಕಾರ್ಯಾಚರಣೆಯ ಉದ್ದೇಶದಿಂದ ಕಂಟೇನ್ಮೆಂಟ್ ವಲಯವು ಸಾಕಷ್ಟು ವಿಸ್ತಾರವಾಗಿರಬೇಕು ಹಾಗೂ ಪಕ್ಕ ಪಕ್ಕದಲ್ಲಿರುವ / ಹತ್ತಿರವಿರುವ ಕೋವಿಡ್ ಪ್ರಕರಣಗಳ ಗುಂಪನ್ನು ಒಳಗೊಂಡಿರಬೇಕು. ಸದರಿ ಪ್ರದೇಶದ ಅಳತೆ / ವಿಸ್ತಾರ ಹಾಗೂ ಗಡಿರೇಖೆಯನ್ನು ಈ ಕೆಳಗಿನಂತೆ ನಿರ್ಧರಿಸಬೇಕು:

1.3.1 ಪ್ರಕರಣಗಳು ಹಾಗೂ ಸಂಪರ್ಕಿತರನ್ನು ಮ್ಯಾಪ್ ಮಾಡುವ ಮೂಲಕ.

1.3.2 ಪ್ರಕರಣಗಳು ಹಾಗೂ ಸಂಪರ್ಕಿತರ ಭೌಗೋಳಿ ಪ್ರಸರಣದ (Geographical dispersion) ಆಧಾರದ ಅನ್ವಯ.

1.3.3 ಗುರುತಿಸಲಾದ ಪರಿಧಿ ವಲಯ (well demarcated perimeter) ಆಧಾರದ ಮೇಲೆ.

1.3.4 ಪರಿಧಿ ವಲಯ ನಿಯಂತ್ರಣವನ್ನು (perimeter control) ಜಾರಿಗೊಳಿಸುವ ಸಂದರ್ಭದಲ್ಲಿ.

ಆಯಾ ಜಿಲ್ಲಾಧಿಕಾರಿಗಳು / ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ಸ್ಥಳೀಯವಾದ ತಾಂತ್ರಿಕ ಸಲಹೆ / ಸೂಚನೆಗಳೊಂದಿಗೆ ಈ ಪ್ರದೇಶವನ್ನು ರಸ್ತೆಗಳು, ಪಾರ್ಕ್‌ಗಳು, ಚರಂಡಿಗಳು ಅಥವಾ ಭೌಗೋಳಿಕವಾಗಿ ಪ್ರತ್ಯೇಕಿಸಲು ಸೂಕ್ತವೆನಿಸುವ ಇನ್ನಾವುದೇ ವೈಶಿಷ್ಟ್ಯಗಳ ಆಧಾರದ ಮೇಲೆ ಪರಿಧಿ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗುರುತಿಸುವರು. ಪರಿಣಾಮಕಾರಿ ನಿಯಂತ್ರಣಕ್ಕಾಗಿ ಮೇಲೆ ತಿಳಿಸಿದ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಿದೆ.

**1.4 ಬಫರ್ ವಲಯ**

ಹೊಸದಾಗಿ ಕೋವಿಡ್ 19 ಪ್ರಕರಣಗಳು ವರದಿಯಾಗುವ ಸಂಭವವಿರುವ ಪ್ರದೇಶವನ್ನು 'ಬಫರ್ ವಲಯ' ಎಂದು ವ್ಯಾಖ್ಯಾನಿಸಲಾಗುತ್ತದೆ..

- ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶಗಳಿಗೆ ಅನ್ವಯವಾಗುವಂತೆ, ಕಂಟೇನ್ಮೆಂಟ್ ವಲಯದ ಸುತ್ತಲಿನ 200 ಮೀಟರ್ ತ್ರಿಜ್ಯದ (radius) ಪ್ರದೇಶವನ್ನು ಬಫರ್ ವಲಯ ಎಂದು ಕರೆಯಲಾಗುತ್ತದೆ.

ಆಯಾ ಜಿಲ್ಲಾಧಿಕಾರಿಗಳು / ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ಮೇಲೆ ತಿಳಿಸಿದ ಮಾನದಂಡಗಳ ಅನ್ವಯ ರಸ್ತೆಗಳು, ಪಾರ್ಕ್‌ಗಳು, ಚರಂಡಿಗಳು ಅಥವಾ ಭೌಗೋಳಿಕವಾಗಿ ಪ್ರತ್ಯೇಕಿಸಲು ಸೂಕ್ತವೆನಿಸುವ ಇನ್ನಾವುದೇ ವೈಶಿಷ್ಟ್ಯಗಳ ಆಧಾರದ ಬಫರ್ ವಲಯವನ್ನು ಗುರುತಿಸುವರು.

## 2. ಸಕ್ರಿಯ ಸರ್ವೇಕ್ಷಣೆ:

ಧಾರಕ ವಲಯ ಹಾಗೂ ಬಫರ್ ವಲಯದಲ್ಲಿ ಕೋವಿಡ್ 19 ಸೋಂಕು ಹರಡುವುದನ್ನು ತಪ್ಪಿಸಲು / ನಿಯಂತ್ರಿಸಲು, ಸಕ್ರಿಯ ಸಮೀಕ್ಷೆ ನಡೆಸಬೇಕು ಹಾಗೂ ದೈಹಿಕ ಅಂತರವನ್ನು ಕಾಪಾಡಿಕೊಳ್ಳಬೇಕು. ಧಾರಕ ವಲಯದಲ್ಲಿ ಮನೆ ಮನೆ ಸಮೀಕ್ಷೆಯನ್ನು ಪ್ರತಿದಿನ ನಡೆಸಬೇಕು ಹಾಗೂ ಬಫರ್ ವಲಯದಲ್ಲಿ ಕಡ್ಡಾಯವಾಗಿ ವಾರದಲ್ಲಿ ಎರಡು ಬಾರಿ ನಡೆಸಬೇಕು.

೩. ಧಾರಕ ವಲಯವನ್ನು ಸಡಿಲಗೊಳಿಸುವುದು:

- ಖಚಿತ ಕೋವಿಡ್ 19 ಪ್ರಕರಣವು ವರದಿಯಾದ 14 ದಿನಗಳ ನಂತರವೂ ಸಹ ಯಾವುದೇ ಹೊಸ ಕೋವಿಡ್-19 ಪ್ರಕರಣವು ವರದಿಯಾಗದೇ ಇದ್ದಲ್ಲಿ; ಹಾಗೂ ಖಚಿತ ಪ್ರಕರಣದ ಸಂಪರ್ಕಿತರನ್ನು 14 ದಿನಗಳ ಅವಧಿಗೆ ಅನುಸರಣೆ ಮಾಡಿದ ನಂತರ ಕಂಟೇನ್ಮೆಂಟ್ ವಲಯವು ಸಾಮಾನ್ಯ ಸ್ಥಿತಿ / ಯಥಾ ಸ್ಥಿತಿಗೆ ಮರಳುತ್ತದೆ.

4. ಪರಿಧಿ ವಲಯ ನಿಯಂತ್ರಣ (Perimeter control), ಘಟನಾ ದಂಡನಾಯಕ, ಪೊಲೀಸ್ ಇಲಾಖೆ, ಗ್ರಾಮ ಪಂಚಾಯತ್ ಹಾಗೂ ಆರೋಗ್ಯ ಇಲಾಖೆಯ ಪಾತ್ರ ಹಾಗೂ ಅಗತ್ಯ ವಸ್ತುಗಳ ಸರಬರಾಜು ಮತ್ತು ನಿರ್ವಹಣೆಯನ್ನು ಈಗಾಗಲೇ ಚಾಲ್ತಿಯಲ್ಲಿರುವ ಕರ್ನಾಟಕ ಸರ್ಕಾರದ ಮಾರ್ಗಸೂಚಿ, ದಿನಾಂಕ:21.5.2020ರ ಅನ್ವಯ ಕೈಗೊಳ್ಳುವುದು (https://covid19.karnataka.gov.in/storage/pdf-files/SOP%20-%20CONTAINMENT%20ZONE%20CLUSTER%20CIRCULAR%20BY%20CS.pdf)

5. ವರದಿಯಾದ ಎಲ್ಲಾ ಖಚಿತ ಕೋವಿಡ್ 19 ಪ್ರಕರಣಗಳು ಆಸ್ಪತ್ರೆಯಿಂದ / ಹೋಂ ಐಸೋಲೇಷನ್‌ನಿಂದ ಬಿಡುಗಡೆ ಹೊಂದಿದ 28 ದಿನಗಳ ನಂತರವಷ್ಟೇ ಯಾವುದೇ ಗ್ರಾಮ/ ನಗರ/ಜಿಲ್ಲೆ / ರಾಜ್ಯವನ್ನು ಕೋವಿಡ್ 19 ಮುಕ್ತ ಎಂದು ಘೋಷಿಸಬಹುದಾಗಿದೆ.

ಜಾ.ಅಖ್ತರ್ 18/9/20
(ಜಾವೇದ್ ಅಖ್ತರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಇವರಿಗೆ:

1) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
2) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ
3) ಎಲ್ಲಾ ಜಿಲ್ಲಾಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
4) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
5) ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು
6) ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್
7) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
8) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
9) ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
10) ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು / ಎಲ್ಲಾ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು

ಪ್ರತಿಗಳನ್ನು:

1) ಸರ್ಕಾರದ ಮುಖ್ಯ ಕಾರ್ಯದರ್ಶಿಯವರು
2) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ
3) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ